ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ)
100(332)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಶಿರಹಟ್ಟಿ ಮತಕ್ಷೇತ್ರದ ಯಾವ ಯಾವ ಗ್ರಾಮ ಪಂಚಾಯತ್ ಗಳಿಗೆ ಕಂಪ್ಯೂಟರ್ ಪೂರೈಸಲಾಗಿದೆ(ಗ್ರಾಮಗಳ ವಿವರ ನೀಡುವುದು)

ಆ) ಯಾವ ಏಜೆನ್ಸಿ ಮೂಲಕ ಕಂಪ್ಯೂಟರ್ ಖರೀದಿಸಲಾಗುವುದು;

ಇ) ಕಂಪ್ಯೂಟರ್ ಏಜೆನ್ಸಿಯವರಿಗೆ ಈವರೆಗೆ ಪಾವತಿಸಿದ ಹಣದ ವಿವರ ನೀಡುವುದು?

ಈ) ಕಂಪ್ಯೂಟರ್ ಖರೀದಿಸುವ ಕುರಿತು ಅನುಸರಿಸಿದ ನಿಯಮಾವಳಿಗಳೇನು;

ಉ)ಇನ್ನೂ ಕಂಪ್ಯೂಟರ್ ಬಳಕೆ ಇಲ್ಲದ ಗ್ರಾಮ ಪಂಚಾಯತ್‌ಗಳು ಯಾವುವು (ಪಂಚಾಯತ್ ವಿವರ ನೀಡುವುದು);

ಊ) ಕಂಪ್ಯೂಟರ್ ಏಜೆನ್ಸಿಯವರಿಗೆ ಇನ್ನೂ ಹಣ ಪಾವತಿಸುವುದು ಇದೆಯೇ; ಇದ್ದರೆ ಇನ್ನೂ ಎಷ್ಟು ಹಣ ಪಾವತಿಸಬೇಕು?

ಶ್ರೀ ಸಿ.ಎಂ.ಉದಾಸಿ

ಅ)ಆದ್ರಳ್ಳಿ, ಕೊಗನೂರು, ಬಾಲೇಹೊಸೂರು, ಸೂರಣಗಿ, ಘಟಗಾಂ ಬಡ್ನಿ, ಗೊಜನೂರು, ಶಿಗ್ಲಿ, ಅಡ್ರಕಟ್ಟಿ, ಯಳವತ್ತಿ, ರಾಮಗಿರಿ,ಕೊಂಚಿಗೇರಿ, ಇಟಗಿ, ತಾರಿಕೊಪ್ಪ, ವಡವಿ ಹಾಗೂ ಮಾಗಡಿ

ಆ)1) ಸಿಲಿಕಾನ್ ಕಂಪ್ಯೂಟರ್, ರಾಣೆಬೆನ್ನೂರು

2) ಇನ್‌ಫಾರ್ಮೆಶನ್ ಟೆಕ್ನಾಲಜಿ, ವಿದ್ಯಾಗಿರಿ, ಧಾರವಾಡ

ಇ)1) ಸಿಲಿಕಾನ್ ಕಂಪ್ಯೂಟರ್, ರಾಣೆಬೆನ್ನೂರು ಇವರಿಗೆ ರೂ.4,77,000.00

2) ಇನ್‌ಫಾರ್ಮೆಶನ್ ಟೆಕ್ನಾಲಜಿ, ವಿದ್ಯಾಗಿರಿ, ಧಾರವಾಡ ಇವರಿಗೆ ರೂ.4,72,368.00

ಈ) ನಿಯಮಾವಳಿ ಪ್ರಕಾರ ನೇರವಾಗಿ ಗ್ರಾಮ ಪಂಚಾಯಿತಿಯವರೆ ಖರೀದಿಸಿದ್ದಾರೆ.

ಉ) ಬಟ್ಟೂರ, ಬನ್ನಿಕೊಪ್ಪ, ರಣತೂರ, ದೊಡ್ಡೂರ

ಊ) ಇದೆ, ರೂ.78,728.00

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಔರಾದ್)102(353)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ ವಿವಿಧ ಜಿಲ್ಲೆಗಳಲ್ಲಿ ಕಳೆದ ಒಂದೂವರೆ ವರ್ಷದಲ್ಲಿ (ದಿನಾಂಕ 30/06/2007ರವರೆಗೆ) ಆಶ್ರಯ, ಅಂಬೇಡ್ಕರ್ ಮತ್ತು ವಿವಿಧ ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ನಿರ್ಮಿಸಲಾಗಿರುವ ಮನೆಗಳ ಸಂಖ್ಯೆ ಎಷ್ಟು;

ಆ) ಇದೇ ಅವಧಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸುವ ಗುರಿಯನ್ನು ಹೊಂದಲಾಗಿತ್ತು?